doc-553
T.P-2

Reg No B G 155 1 — 10 —72

In The State **First Golden Jubilee Celebrated Paper 'Satyavadi' daily, Mysore 4**

56th Year of Publication

★

News, Views, Dharmic Moral Ethical Matters



ರಾಷ್ಟ್ರದಲ್ಲಿ ಪ್ರಥಮ
ಮಹೋತ್ಸವ
ಪೆರ ವೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಅಧಿಕಾರಿಗಳಿಗೆ ಮುಖ್ಯಮಂತ್ರಿಯವರ ಎಚ್ಚರಿಕೆ

ಗಾಂಧಿ ಜಯಂತಿ

ಮೈಸೂರು— ಪುರಸಭೆ ಆಶ್ರಯದಲ್ಲಿ ತಾ|| 2 ಸೋಮವಾರ ಪುರಭವನದ ಬಯಲು ಮಂಟಪದಲ್ಲಿ ಗಾಂಧಿ ಜಯಂತಿ ದಿನಾಚರಣೆಯನ್ನು ಏರ್ಪಡಿಸಲಾಗಿದೆ.

★

ರಜತ ಮಹೋತ್ಸವ

2 ನೇ ತಾ|| ಸಂಜೆ 6 ಗಂಟೆಗೆ ಮೈಸೂರು ಪುರಭವನದ ಬೈಲರಂಗ ಮಂಟಪದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಸಮಾರಂಭದಲ್ಲಿ ಮೈಸೂರು ರಾಜ್ಯದ ಕೈಗಾರಿಕೆ ಮಂತ್ರಿಯವರಾದ ಶ್ರೀ ಎಸ್. ಎಂ. ಕೃಷ್ಣರವರು ಭಾಗವಹಿಸುವರು.

★

ಲೆವಿ ಸಕ್ಕರೆ ಬೆಲೆ

ದೇಶಾದ್ಯಂತ ಸರ್ವ ರಾಜ್ಯಗಳಲ್ಲೂ ಲೆವಿ ಸಕ್ಕರೆಯನ್ನು ಕಿಲೋಗೆ 2 ರೂಪಾಯಿಗಳಂತೆ ಮಾರಲಿನೆ.

●

ಮುಜಿಬರ್ ನಿವೃತ್ತಿ

ಮುಂದಿನ ವರ್ಷದ ಬಂಗ್ಲಾ ದೇಶದ ಚುನಾವಣೆಯಲ್ಲಿ ಆಡಳಿತ ಪಕ್ಷ ಅವಾಮಿ ಲೀಗು ಬಹುಸಂಖ್ಯೆ ಪಡೆದರೆ ತಾವು ನಿವೃತ್ತರಾಗುವುದಾಗಿ ಅಲ್ಲಿಯ ಪ್ರಧಾನಿ ಮುಜಿಬರ್ ರೆಹಮ್ಮಾ ಇಚ್ಛಿಸಿರುವುದಾಗಿ ಡಕ್ಕಾದಿಂದ ವಾರ್ತೆ ಬಂದಿದೆ.

★

ಪೋಲೀಸರಿಂದ ವಶ

ಕಾರವಾರ ಪೋಲೀಸರು ಸೆಪ್ಟಂಬರು ತಿಂಗಳಲ್ಲಿ 1 ಲಕ್ಷ ರೂಪಾಯಿಗಳಿಗೆ ಹೆಚ್ಚಾಗಿ ಹೆಂಡವನ್ನು, 2 ಲಕ್ಷ ರೂ.ಗೆ ಹೆಚ್ಚಾಗಿ ಆಹಾರ ಧಾನ್ಯವನ್ನು ವಶಪಡಿಸಿಕೊಂಡರು

★

ಬಾಡಿಗೆ ರೂ. 12 ಸಾವಿರ

ಹಾಕಾಂಗಿನಲ್ಲಿ ಸರಿಯಾದ ಸ್ಥಳಗಳಲ್ಲಿ ತಿಂಗಳಿಗೆ ಹನ್ನೆರಡು ಸಾವಿರ ರೂ ಬಾಡಿಗೆ ಮನೆಯನ್ನು ಪಡೆಯಲು ಅಲ್ಲಿನ ಭಾರತ ರಾಯಭಾರಿಗೆ ಭಾರತ ಸರ್ಕಾರ ಅಧಿಕಾರ ಇತ್ತಿದೆ

★

ಮುಖ್ಯ ಮಂತ್ರಿಯವರ ಎಚ್ಚರಿಕೆ

ಅಧಿಕಾರಿಗಳ ಕೋಮುವಾರು ಭಾವನೆಯಿಂದ ಅಧಿಕಾರಿಗಳು ಪಕ್ಷಪಾತ ಮಾಡುವುದನ್ನು ಸರ್ಕಾರ ಸಹಿಸುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸಿನವರು ವಿಚ್ಚರಿಕೆ ನೀಡಿರುವುದಾಗಿ ಗುಲ್ಬರ್ಗಾ ವಾರ್ತೆ ತಿಳಿಸುತ್ತದೆ.

★

ಕಾಲೇಜುಗಳು ಮುಚ್ಚಲಾಗುವುದು

ಮೈಸೂರು — ಹೋಟಲುಗಳಲ್ಲಿ ತಿಂಡಿಯ ಬೆಲೆ ತಗ್ಗಿಸಬೇಕೆಂಬ ವಿದ್ಯಾರ್ಥಿಗಳ ಚಳುವಳಿಗಾಗಿ ನಗರದ ಎಲ್ಲ ಕಾಲೇಜುಗಳು ಅಕ್ಟೋಬರು 3 ರಿಂದ ನವೆಂಬರು 12 ರ ವರೆಗೆ ಮುಚ್ಚಲಾಗುವುದು ಎಂದು ವರದಿಯಾಗಿದೆ.

★

ಬೆಲೆ ಹೆಚ್ಚಿತ

ನವದೆಹಲಿ— 72–73 ಹಿಂಗಾರುವಿನಲ್ಲಿ ಪಡೆಯುವ ಕ್ವಿಂಟಾಲು ಅಕ್ಕಿಗೆ ರೂ 3, ಭತ್ತಕ್ಕೆ ರೂ. 1 ಮತ್ತು 2 ಹೆಚ್ಚಿಸಲು ವ್ಯವಸಾಯ ಬೆಲೆ ಕಮಿಷನ ಶಿಫಾರಸನ್ನು ಎಲ್ಲ ಮುಖ್ಯ ಮಂತ್ರಿಗಳೂ ಸರ್ವಾನುಮತದಿಂದ ಒಪ್ಪಿದರು.

○ ಮೈಸೂರು ನಗರದಲ್ಲಿ 5 ಮಂದಿಗೆ ಹೆಚ್ಚಾಗಿ ಸೇರುವುದು, ಬಹಿರಂಗ ಸಭೆ ನಡೆಸುವುದು ಇವು ಒಂದು ವಾರ ನಿಶೇಧಿತವಾಗಿದೆ.

ರಾಷ್ಟ್ರೀಕರಣ

ನವದೆಹಲಿ— ಏರುತ್ತಿರುವ ಬೆಲೆ ತಡೆಗಟ್ಟಲು ಕಡೇಪಕ್ಷ ಅವಶ್ಯ ಪದಾರ್ಥಗಳ ಒಟ್ಟಾರೆ ವ್ಯಾಪಾರವನ್ನಾದರೂ ರಾಷ್ಟ್ರೀಕರಣ ಮಾಡಬೇಕೆಂದು ಕೈಗಾರಿಕೆ ಅಭಿವೃದ್ಧಿ ಮಂತ್ರಿ, ಶ್ರೀ ಸುಬ್ರಹ್ಮಣ್ಯಂರು ಕರೆ ಇತ್ತಿರುವರು

★

ಭಂಗಾರದ ಪದಕ

ಬೊಂಬಾಯಿನಿಂದ ಬಂದಿರುವ ವರದಿ ಪ್ರಕಾರ ಬಲ್ಗೇರಿಯಾದ ಪ್ಲೋವ್‌ದಿವ್ ಅಂತರಾಷ್ಟ್ರ ಸಂತೆಯಲ್ಲಿ ಭಾರತದ ಪೆವಿಲಿಯನಿಗೆ ಭಂಗಾರದ ಪದಕ ಬಂದಿದೆ.

★

ವಿಚಾರಣೆಗೆ ಕೇಳಿಕೆ

ಮೈಸೂರು— ನಿನ್ನೆ ನಡೆದ ಪುರಸಭಾಧಿವೇಶನದಲ್ಲಿ, ವಿಶ್ವವಿದ್ಯಾನಿಲಯದ ಆಡಳಿತ ವಿಷಯದಲ್ಲಿ ವಾಗ್ವಾದವಿದ್ದು, ಅಸಾದನೆ ಎದುರು ಅಪಾದನೆಗಳು ಹೊರಬೀಳುತ್ತಿರುವದರಿಂದ ವಿಶ್ವವಿದ್ಯಾಲಯದ ವಿಚಾರಗಳ ಬಗ್ಗೆ ವಿಚಾರಣೆ ನಡೆಸಬೇಕೆಂದು ಕೇಳಿಕೆ ಹಾಕಲಾಯಿತು.

★

ಪಶುವೈದ್ಯ ವಿದ್ಯಾರ್ಥಿಗಳು

ಬೆಂಗಳೂರು— ಪಶುವೈದ್ಯಶಾಲಾ ವಿದ್ಯಾರ್ಥಿಗಳ ಕ್ರಿಯಾ ಸಮಿತಿಯು ತಮ್ಮ ನ್ಯಾಯವಾದ ಕೇಳಿಕೆಯನ್ನು ತಾ || 10 ರೊಳಗೆ ಸರಕಾರ ನೆರವೇರಿಸದಿದ್ದರೆ ಅವಶ್ಯಕ್ರಮ ಕೈಗೊಳ್ಳಲಾಗುವದೆಂದು ಬೆದರಿಕೆ ಹಾಕಿದೆ – ಈ ವಿದ್ಯಾರ್ಥಿಗಳ ಚಳವಳಿ 50 ನೇ ದಿನಕ್ಕೆ ಬಂದಿದೆ

★ ಮೈಸೂರು ವಿಶ್ವವಿದ್ಯಾನಿಲಯವು ಇನ್ನು ಕೆಲವು ತಿಂಗಳಲ್ಲಿ ಒಂದು ಕಂಪ್ಯೂಟರು ಕೇಂದ್ರ ಸ್ಥಾಪಿಸಲಿದೆ

ಹರಿಜನರ ಫಲಹಾರ ಮಂದಿರ

ಕೊಚ್ಚಿಯಿಂದ ಬಂದಿರುವ ವರದಿಯ ಪ್ರಕಾರ, ಹರಿಜನರಿಂದ ನಡೆಸಲಾಗುವ, ಹರಿಜನರೇ ಆಹಾರ ಒದಗಿಸುವ ಕೇರಳದಲ್ಲಿ ಪ್ರಪ್ರಥಮ ಹರಿಜನ ಫಲಹಾರ ಮಂದಿರವು ಮಲ್ಲಾಪುರಂ ಜಿಲ್ಲೆ ಎಡಪಾಲ್ ನಲ್ಲಿ ತಾ|| 7 ರಂದು ತೆರೆಯಲಾಗುವುದು.

★

ಆದೇ ಗತಿಯಾಯಿತು

ರಾಜಕೋಟೆ— 5 ಮಂದಿ ಮೆಟ್ರಿಕ್ಯಾಸಾದ ಹರಿಜನರು, ತಮ್ಮ ವಂಶಪಾರಂಪರ್ಯವಾದ ಜಾಡಮಾಲಿ ಕೆಲಸಕ್ಕೆ ಒತ್ತಾಯದಿಂದ ಸೇರಬೇಕಾಯಿತು – 2 ವರ್ಷಗಳಿಂದ ಅವರಿಗೆ ಸರಿಯಾದ ಬೇರೆ ಕೆಲಸ ಸಿಕ್ಕಲಿಲ್ಲ.

●

ರೂ. 1 ಲಕ್ಷದ ವಿಷಯ

ಕೊಚ್ಚಿ— ಅಸ್ವಭಾವಿಕ ಶಕ್ತಿಯನ್ನು ಸಿದ್ಧಿಪಡಿಸುವುದಾಗಿ ಹೇಳಿರುವ ಬೊಂಬಾಯಿನ ಶ್ರೀ ತೀರ್ಥಕರ್‌ರವರ ಸವಾಲಿಗೆ ಸಮ್ಮತಿಸಿರುವ ಸಿಲೋನಿನ ಡಾ || ಎಬ್ರಹಿಂ ಕಾವೂ ಸಿದ್ಧಿಪಡಿಸಿದರೆ ರೂ. 1 ಲಕ್ಷ ಕೊಡುವುದಾಗಿ ಹೇಳಿ, ಅವರು ಲಂಕಾದ ರೂ. 2 ನೋಟನ ಸರಿಯಾದ ಪ್ರತಿಕೃತಿ ಹಾಜರ್‌ಪಡಿಸಬೇಕೆಂದಿರುವ. ಈ ಪರೀಕ್ಷೆಗೆ ತಾವು ಮತ್ತು ತಮ್ಮ ಪತ್ನಿ ಬೊಂಬಾಯಿಗೆ ಬರುವುದರ ಖರ್ಚನ್ನು ಕೇವಣಿ ಮಾಡಬೇಕೆಂದೂ, ಅವರು ಕಾರ್ಯದಲ್ಲಿ ಯಶಸ್ವಿಯಾದರೆ, ರೂ. 1 ಲಕ್ಷದ ಜೊತೆಗೆ ಇದೂ ಕೊಡಲಾಗುವುದೆಂದಿರುವರು.

ತಮಕೂರು ಜಿಲ್ಲೆ ಬೈಲಗ್ರಾಮದ ಕ್ಷೌರಿಕನು ಇತರ ಜಾತಿಯವನೊಬ್ಬನಿಗೆ ಕ್ಷೌರಮಾಡಲು ನಿರಾಕರಿಸಿದರಿಂದ ಅಸ್ಪೃಶ್ಯ ಶಾಸನ ರೀತ್ಯ ಅವನನ್ನು ದಸ್ತಗಿರಿ ಮಾಡಲಾಗಿದೆ

ವಿಶ್ವ ಜನಸಂಖ್ಯೆ

ನವದೆಹಲಿ— 1975 ರಲ್ಲಿ ವಿಶ್ವ ಜನಸಂಖ್ಯೆಯು ಉನ್ನತಮಟ್ಟಕ್ಕೆ ಏರಿದ ಂತರ ಇಳಿಯಲು ಪ್ರಾರಂಭವಾಗುವುದೆಂದು ರಷ್ಯಾದಲ್ಲಿ ನಡೆಸಿದ ವ್ಯಾಸಂಗದಿಂದ ೃಕ್ತವಾಗಿದೆಯೆಂದು ಪ್ರಕಟವಾಗಿದೆ.

★

ಕಾರುಣ್ಯ ಕೊಲೆ

ತ್ರಿಚೂರು— ಸಹಿಸಲಾರದ ನೋವು, ವಾಸಿಯಾಗದ ಮತ್ತು ಮರಣಕಾರಕ ೋಗಗಳಿಂದ ನರಳುವ ಜನರನ್ನು, ಇವರು ವಾಸಿಯಾಗದ ಮರಣಕಾರಕ ರೋಗಗ್ರ ್ತರಾಗಿರುವರೆಂದು ಇಬ್ಬರು ವೈದ್ಯರು ದೃಢಪಡಿಸಿ ಸರ್ಟಿಫಿಕೇಟು ಕೊಟ್ಟರೆ, ಅಂಥ ೋಗಿಗಳನ್ನು ನೋವಾಗದಂತೆ ಸಾಯಿಸುವುದುಶಾಸನಬದ್ಧವಾಗಬೇಕೆಂದು ಡಾ || ಂ. ಸಿ. ಮೋದಿ ಅಭಿಪ್ರಾಯ ವ್ಯಕ್ತಪಡಿಸಿದರು.

ಟೋಕಿಯೋದಲ್ಲಿ ವಯೋವೃದ್ಧರಿಗೆ ಸೌಲಭ್ಯ

ಜಪಾನಿನ ಟೋಕಿಯೋದಲ್ಲಿನ ಸಬ್‌ವೇಗಳಲ್ಲಿ ಸಂಚರಿಸುವ ವಾಹನಗಳಲ್ಲಿ ೃಯೋವೃದ್ಧರಿಗೆ ಉಚಿತ ಪ್ರಯಾಣಕ್ಕೆ ಅನುಮತಿ ಕೊಡುವುದಾಗಿ ನಗರ ಸರಕಾರ ್ರ ನಿರ್ಧರಿಸಿದೆ : ಟೋಕಿಯೋತಲ್ಲಿ ವಾಸಿಸುವ 70 ವರ್ಷಕ್ಕೆ ಮೇಲ್ಪಟ್ಟ ವೃದ್ಧರಿಗೆ ಉಚಿತ ಪರವಾನಿ ನೀಡಲಾಗುವುದು ; ಇಂಥವರ ಸಂಖ್ಯೆಯೂ ಪ್ರಕೃತ ಟೋಕಿಯೊ ಲ್ಲಿ 360000 ದಷ್ಟಿದೆ ; ವೃದ್ಧರಿಗಾಗಿ ನೀಡುತ್ತಿರುವ ಅನೇಕ ಸಹಾಯಗಳಲ್ಲಿ ಇ ೂ ಒಂದು ; ವೃದ್ಧರಿಗಾಗಿಯೇ ಬೇರೆ ವೈದ್ಯಶಾಲೆ ಸೌಲಭ್ಯ ಸಂಶೋಧನಾ ಕೇಂದ್ರ ಲ್ಲಿ ಮಾಟ್ಟಮೊದಲು ಪ್ರಾರಂಭವಾಗಿದೆ : ಕಳೆದ ಮೇ ತಿಂಗಳಲ್ಲಿ ಇಟಾಬಷಿ ವಾರ್ಡ್ ನ್ನು ತೆರೆಯಲಾಯಿತು.

ವುಡ್‌ಲ್ಯಾಂಡ್ 29 9 72 ರಿಂದ
ಶಿ ನ್

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ಜ ವಾ ನಿ ದಿ ವಾ ನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ

ಸಂಗೀತ : ಆರ್. ಡಿ. ಬರ್ಮನ್

ದಿನ 3 ಪ್ರದರ್ಶನಗಳು

ಅ ಪೆ ರಾ 22 9 72 ರಿಂದ

ಶ್ರೀ ನವನೀತ್ ಫಿಲಂಸ್‌ರವರ ಅಮೋಘ ತಮಿಳು ಚಿತ್ರ

ಪು ಗು ಂ ದ ವಿ ೀ ಡು

ನಿರ್ದೇಶನ : ಪಟ್ಟು

ಪ್ರತಿ ದಿನ 3 ಪ್ರದರ್ಶನಗಳು

SHAKTI
SUDHA

A Superb Tonic

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೀಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

★

ಆ ನೆ - ಹು ಡು ಗ

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

Potect the Cow

For Rugs, Sweaters, and Kashmir Coats Visit Bank Road Bahusar

Quality Printing Neat Binding

Lakshminarasimha Press

Sivarampet. Mysore

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarājapuram Mysore